ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail: registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ವಿಶೇಷ ಸಭೆ/684 /2018–19** **ದಿನಾಂಕ: 11.03.2019.**

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೇ

**ವಿಷಯ: ದಿನಾಂಕ: 28.02.2019 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 28.02.2019 ರಂದು ಪೂರ್ವಾಹ್ನ 11–30 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕ ದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ.

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–ಸಭೆ/684/2018–19 ದಿನಾಂಕ: 11.03.2019.

ದಿನಾಂಕ 28.02.2019 ರಂದು ಪೂರ್ವಾಹ್ನ 11.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ: ಎಸ್. ಜಾಫೆಟ್<br>ಕುಲಪತಿಗಳು | ಸಭಾಧ್ಯಕ್ಷರು |
| 2. | ಪ್ರೊ: ಕೆ.ಟಿ. ಮಂಜುನಾಥ<br>ಜಂಟಿ ನಿರ್ದೇಶಕರು<br>ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಪರವಾಗಿ | ಸದಸ್ಯರು |
| 3. | ಡಾ: ಅರವಿಂದ್ ಹೆಚ್.ಟಿ. | ಸದಸ್ಯರು |
| 4. | ಶ್ರೀ. ಹೆಚ್.ಆರ್. ಸತೀಶ್ | ಸದಸ್ಯರು |
| 5. | ಡಾ: ಶಾಂತಿ ರಾಜೇಂದ್ರಕುಮಾರ್ | ಸದಸ್ಯರು |
| 6. | ಡಾ: ಎಸ್. ಹರೀಶ್ | ಸದಸ್ಯರು |
| 7. | ಡಾ: ಆಶಾ ಗಣೇಶ್ | ಸದಸ್ಯರು |
| 8. | ಡಾ: ಲತಾಕುಮಾರಿ | ಸದಸ್ಯರು |
| 9. | ಶ್ರೀಮತಿ ಗೀತಾ ಎಸ್<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಪರವಾಗಿ | ಸದಸ್ಯರು |
| 10. | ಪ್ರೊ: ಎನ್. ಚಂದ್ರಪ್ಪ<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 11. | ಪ್ರೊ: ಎಂ.ರಾಮಚಂದ್ರಗೌಡ<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಸಭೆ ಪ್ರಾರಂಭಕ್ಕೆ ಮುನ್ನ ಇತ್ತಿಚೆಗೆ ಲಿಂಗೈಕ್ಯರಾರ ತುಮಕೂರಿನ ಸಿದ್ಧಗಂಗಾ ಮಠದ ಶ್ರೀಗಳಾದ, ಶತಾಯಿಷಿ ನಡೆದಾಡುವ ದೇವರೆಂದು ಗೌರವಿಸಲ್ಪಟ್ಟ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಹಾಗೂ ಪುಲ್ವಾಮಾದಲ್ಲಿ ಉಗ್ರಗಾಮಿಗಳ ಬಾಂಬ ಸ್ಪೋಟದಿಂದ ನಿಧನಹೊಂದಿದ CRPF ಯೋಧರ ಗೌರವಾರ್ಥ ಸಭೆ ಒಂದು ನಿಮಿಷದ ಮೌನವನ್ನು ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿತು.

ಈ ವಿಶ್ವವಿದ್ಯಾಲಯದಲ್ಲಿ ಕುಲಸಚಿವರು (ಮೌಲ್ಯಮಾಪನ)ರಾಗಿ ಸೇವೆ ಸಲ್ಲಿಸುತ್ತಿದ್ದ ಪ್ರೊ: ಲಿಂಗರಾಜ ಗಾಂಧಿಯವರು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ) ರಾಗಿ ನೇಮಕ ಹೊಂದಿ ದಿನಾಂಕ 25.02.2019 ರಂದು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಿಂದ ಬಿಡುಗಡೆ ಹೊಂದಿರುತ್ತಾರೆ ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಪ್ರೊ: ಲಿಂಗಾರಾಜ ಗಾಂಧಿಯವರು ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಫಲಿತಾಂಶಗಳನ್ನು ನಿಗದಿತ ಅವಧಿಯಲ್ಲಿ ಪ್ರಕಟಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು. ಪರೀಕ್ಷಾ ವಿಭಾಗದ ಎಲ್ಲಾ ಚಟುವಟಿಕೆಗಳನ್ನು ಗಣಕೀಕರಣ ಗೊಳಿಸಿ, e-governance ಪದ್ದತಿಯನ್ನು ಕಾರ್ಯರೂಪದಲ್ಲಿ ತರುವಲ್ಲಿ ಅವರು ಕೈಕೊಂಡ ಕ್ರಮಗಳನ್ನು ವಿವರಿಸಿ ಅವರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸೇವೆಗಾಗಿ ಅಭಿನಂದನೆಗಳನ್ನು ವ್ಯಕ್ತ ಪಡಿಸಿದರು. ಪ್ರೊ: ಎನ್. ಚಂದ್ರಪ್ಪ, ದೈಹಿಕ ಶಿಕ್ಷಣ ವಿಭಾಗದ ಪ್ರಾಧ್ಯಾಪಕರು, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ಅವರು ದಿನಾಂಕ 25.02.2019 ರಂದು ಈ ವಿಶ್ವವಿದ್ಯಾಲಯದ ನೂತನ ಕುಲಸಚಿವ(ಮೌಲ್ಯಮಾಪನ)ರಾಗಿ ನೇಮಕಹೊಂದಿರುತ್ತಾರೆಂದು ತಿಳಿಸಿ ಅವರನ್ನು ಸಭೆಗೆ ಪರಿಚಯಿಸಿದರು.

**2019-20ನೇ ಶೈಕ್ಷಣಿಕ ಸಾಲಿಗಾಗಿ ವಿವಿಧ ಸಂಯೋಜಿತ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು.**

ಈ ವರ್ಷ ಹಾಲಿ ಮಹಾವಿದ್ಯಾಲಯಗಳ ಮುಂದುವರಿಕೆ ಸಂಯೋಜನೆ /ವಿಸ್ತರಣೆ / ಹೊಸ ಕೊರ್ಸು / ಹೊಸ ವಿಷಯ ಹಾಗೂ ಹೊಸ ಮಹಾವಿದ್ಯಾಲಯಗಳ ಸ್ಥಾಪನೆ ಕುರಿತು ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸ ಬೇಕಾಗಿದೆ ಎಂದು ತಿಳಿಸಿದರು. ವಾಡಿಕೆಯಂತೆ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಒಂದರಂತೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸ ಬೇಕಾಗಿದೆ. ಕಡಿಮೆ ಮಹಾವಿದ್ಯಾಲಯಗಳ್ನು ಹೊಂದಿರುವ ವಿಧಾನ ಸಭಾ ಕ್ಷೇತ್ರಗಳನ್ನು ಹತ್ತಿರದ ಕ್ಷೇತ್ರದೊಂದಿಗೆ ವಿಲೀನಗೊಳಿಸಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲಾಗುವುದೆಂದು ತಿಳಿಸಿದರು. ಸ್ಥಳೀಯ ವಿಚಾರಣಾ ಸಮಿತಿಗಳ ರಚನೆ ಕುರಿತು ಸರ್ಕಾರದ ಪತ್ರ ಕ್ರಮಾಂಕ. ಇಡಿ 166 ಯುಆರ್‌ಸಿ 2018 ದಿನಾಂಕ 02.02.2019 ರಲ್ಲಿ ತಿಳಿಸಿರುವ ಸೂಚನೆಗಳನ್ನು ಸಭೆಯ ಗಮನಕ್ಕೆ ತಂದು ಸದರಿ ನಿರ್ದೇಶನಗಳ ಅನ್ವಯ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಿಸದೇ ಕಡ್ಡಾಯವಾಗಿ ಕೇವಲ ವಿಷಯ ಪಾರಂಗತರನ್ನು ಹಾಗೂ ಶೈಕ್ಷಣಿಕ ತಜ್ಞರನ್ನು ನೇಮಿಸುವ ಮೂಲಕ ಸಂಯೋಜನೆ ಪ್ರಕ್ರಿಯೆಗಳನ್ನು ಜರುಗಿಸಿ ಮಾರ್ಚ್–31 ರೊಳಗೆ ಸರ್ಕಾರಕ್ಕೆ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಮುಂದುವರೆದು, ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸುವ ವಿಶ್ವವಿದ್ಯಾಲಯಗಳ ಅಧಿಕಾರಿಗಳ ವಿರುದ್ಧ ನಿಷ್ಠುಷ್ಟ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಶ್ರೀ ಅರವಿಂದ್ ಹೆಚ್.ಟಿ ಮತ್ತು ಶ್ರೀ ಸತೀಶ್ ಹೆಚ್.ಎಸ್ ಇವರು ಸರ್ಕಾರದ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾಗಿರುವ ರಿಟ್ ಅರ್ಜಿ ಸಂಖ್ಯೆ: 2510/2017 ರ ಪ್ರಕರಣವನ್ನು ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ 12.10.2018 ರಂದು ವಜಾಗೊಳಿಸಿರುತ್ತದೆ ಎಂದು ತಿಳಿಸಲಾಗಿದೆ. ಆದರೆ, ಇದೇ ವಿಷಯ ಕುರಿತಂತೆ ಶ್ರೀ ವಸಂತಕುಮಾರ್ ಹಾಗೂ ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 55554-55557/2018 (GM-RES)ಗಳನ್ನು ದಾಖಲಿಸಿದ್ದು, ಈ ರಿಟ್ ಅರ್ಜಿಗಳ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 18.12.2018 ರಂದು ಮಧ್ಯಂತರ ಆದೇಶ ನೀಡಿದೆ ಎಂದು ತಿಳಿಸಿದರು. ಸರ್ಕಾರದ ಪತ್ರದಲ್ಲಿ ಇವುಗಳ ಪ್ರಸ್ತಾಪ ಇರುವುದಿಲ್ಲವೆಂದು ತಿಳಿಸಿ ಮಧ್ಯಂತರ ಆದೇಶ ಊರ್ಜಿತದಲ್ಲಿದ್ದು ಸದರಿ ಆದೇಶದಂತೆ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಬೇಕಾಗುತ್ತದೆ ಎಂದು ಪ್ರತಿಪಾದಿಸಿದರು. ಸರ್ಕಾರದ ನಿರ್ದೇಶನದಂತೆ ಕ್ರಮ ಕೈಕೊಂಡಲ್ಲಿ, ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶದ ಉಲ್ಲಂಘನೆಯಾಗುತ್ತದೆ ಎಂದು ತಿಳಿಸಿ, ಈ ಕುರಿತು ಕಾನೂನು ಸಲಹೆ ಪಡೆಯಬಹುದೆಂದು ತಿಳಿಸಿದರು.

ಕುಲಪತಿಗಳು ವಿವರಣೆ ನೀಡುತ್ತಾ, ಸಿಂಡಿಕೇಟ್ ಸಭೆ ಉನ್ನತ ಮಟ್ಟದ ಸಭೆಯಾಗಿದ್ದು, ಸ್ಥಳೀಯ ವಿಚಾರಣಾ ಸಮಿತಿಗಳು ನೀಡುವ ಶಿಫಾರಸ್ಸುಗಳ ಮೇಲೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಪ್ರಾಧಿಕಾರವಾಗಿದೆ. ಇಂತಹ ಪ್ರಾಧಿಕಾರದ ಸದಸ್ಯರು ಮಹಾವಿದ್ಯಾಲಯಗಳಿಗೆ ಬೇಟಿ ನೀಡಿ ತನಿಖೆ ಮಾಡಿ ವರದಿ ಸಲ್ಲಿಸುವುದು ಹಾಗೂ ಆ ವರದಿಗಳ ಮೇಲೆ ತೀರ್ಮಾನ ತೆಗೆದುಕೊಳ್ಳುವುದು ಸಮಂಜಸವಲ್ಲವೆಂದು ತಿಳಿಸಿದರು. ಪ್ರೊ: ಎನ್. ಚಂದ್ರಪ್ಪ ಅವರು ಕುಲಪತಿಗಳ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿದರು. ಸದಸ್ಯರಾದ ಡಾ: ಹರೀಶ್, ಡಾ: ಲತಾಕುಮಾರಿ, ಡಾ: ಮಂಜುನಾಥ್, ಇವರುಗಳು ಈ ಕುರಿತು ಕಾನೂನು ಸಲಹೆ ಪಡೆಯಬೇಕೆಂದು ತಿಳಿಸಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪರವಾಗಿ ಆಗಮಿಸಿದ ಶ್ರೀಮತಿ ಎಸ್. ಗೀತಾ ಅವರು, ವಿಚಾರಣೆಗೆ ಬಾಕಿಯಿರುವ ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಮಾನಕ್ಕೆ ಒಳಪಡುವ ನಿಬಂಧನೆಯೊಂದಿಗೆ ಸ್ಥಳಿಯ ವಿಚಾರಣಾ ಸಮಿತಿಗಳನ್ನು ರಚಿಸಿ ಕ್ರಮ ಕೈಕೊಳ್ಳಬಹುದೆಂದು ತಿಳಿಸಿದರು.

ಕುಲಪತಿಗಳು, ಸರ್ಕಾರ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸರ್ಕಾರದ ಪತ್ರದಲ್ಲಿ ನಿರ್ದೇಶನ ಇರುವುದರಿಂದ; ರಿಟ್ ಅರ್ಜಿ ಸಂಖ್ಯೆ 55554-55557/2018 (GM-RES)ರಲ್ಲಿ ದಿನಾಂಕ 18.12.2018 ರಂದು ನೀಡಿದ ಮಧ್ಯಂತರ ಆದೇಶದ ವಿವರಗಳನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರ ನೀಡುವ ಮುಂದಿನ ಸೂಚನೆ ಪ್ರಕಾರ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಿ ಅಗತ್ಯ ಕ್ರಮ ಕೈಕೊಳ್ಳಲು ಈ ಸಭೆ ತೀರ್ಮಾನ ತೆಗೆದುಕೊಳ್ಳಬಹುದೆಂದು ತಿಳಿಸಿದರು. ಈ ಸಲಹೆಗೆ ಸದಸ್ಯರಾದ ಡಾ:ಕೆ.ಟಿ. ಮಂಜುನಾಥ್, ಡಾ: ಶಾಂತಿ

ರಾಜೇಂದ್ರಕುಮಾರ್, ಡಾ:ಎಸ್. ಹರೀಶ್ ಹಾಗೂ ಇತರರು ಸಹಮತ ವ್ಯಕ್ತ ಪಡಿಸಿದರು. ಇದಕ್ಕೆ ಸಿಂಡಿಕೇಟ್ ಸದಸ್ಯರಾದ ಶ್ರೀ ಅರವಿಂದ್ ಹೆಚ್.ಟಿ ಮತ್ತು ಶ್ರೀ ಸತೀಶ್ ಹೆಚ್.ಎಸ್ ಇವರು ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು.

ದೀರ್ಘ ಚರ್ಚೆಯನಂತರ ಸಿಂಡಿಕೇಟ್ ಸಭೆ ಕೆಳಗಿನಂತೆ ನಿರ್ಣಯಿಸಿತು:

**ನಿರ್ಣಯ:**

**ದಿನಾಂಕ 02.02.2019ರ ಸರ್ಕಾರದ ಪತ್ರದಲ್ಲಿ ರಿಟ್ ಅರ್ಜಿ ಸಂಖ್ಯೆ: 55554-55557/2018 (GM-RES) ಮತ್ತು ದಿನಾಂಕ 18.12.2018 ರ ಮಧ್ಯಂತರ ಆದೇಶದ ಪ್ರಸ್ತಾಪ ಇಲ್ಲದಿರುವುದರಿಂದ, ಈ ಕುರಿತು ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮ ಕೈಕೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ನಿರ್ಣಯಿಸಿತು.**

**ಮೇಲಿನ ನಿರ್ಣಯಕ್ಕೆ ಸಿಂಡಿಕೇಟ್ ಸದಸ್ಯರಾದ ಶ್ರೀ ಅರವಿಂದ್ ಹೆಚ್.ಟಿ ಮತ್ತು ಶ್ರೀ ಸತೀಶ್ ಹೆಚ್.ಎಸ್ ಇವರು ಅಸಮ್ಮತಿಯನ್ನು ಲಿಖಿತರೂಪದಲ್ಲಿ ಸಲ್ಲಿಸಿದರು. ಸದರಿ ಪತ್ರದ ಪ್ರತಿಗಳನ್ನು ಈ ನಡಾವಳಿಯೊಂದಿಗೆ ಲಗತ್ತಿಸಲಾಗಿದೆ.**

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ<br>ಕುಲಸಚಿವರು | ಸಹಿ<br>ಕುಲಪತಿಗಳು |

**ಪ್ರತಿ**

ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ

To,
The Registrar,
Bengaluru Central University
Central College Campus
Bengaluru

Date:28-02-2019

Respected Sir,

Sub: Dissent note for the subject in the agenda of the special syndicate meeting held on dated:28-2-2019

1. As informed to the meeting the Hon'ble Vice Chancellor has mentioned that the under secretary department of higher education Government of Karnataka in his letter no-ED166 URC 2018 dated 02-02-2019 has directed not to appoint syndicate members to the LIC(Local Inquiry Committee) quoting disposal of writ petition No:2510/2017 of the Hon'ble High Court.

2. When questioned about the latest writ petition No: 55554-55557/2018 dated 18-12-2018 the Hon'ble VC has specifically told the meeting that he has already informed State Government and have got latest direction from the State Government in the letter mentioned above.

3. In contrary to this he disclosed in the meeting that he received the said letter only two days prior to the syndicate meeting , though the letter is dated: 02-02-2019.

4. When requested by the members to seek a legal opinion from the legal advisor regarding the latest orders of the high court and take suitable decision, Hon'ble VC informed to the members that the University do not have a legal advisor nor has sought any legal advice from any legal consultant on any matter, ever since the existence of this University.

Dissent Note: We dissent to the decision taken by the hon'ble VC to go ahead with constitution of the LIC, violating the order on the writ petition no's. 55554-55557/2018 dated: 18th dec 2018 of the hon'ble High Court.

RPL-235 28/2/19

Syndicate Members,

1967 28/2/19

1. Dr. Arvind H.T

2. H.R.Sathish

VC

1/3/2019